# ಪೌರಾಣಿಕ ವ್ಯಕ್ತಿಗಳು



**ಏ**ನೂ ಬೇಕಾಗಿಲ್ಲ, ಆದರೂ ಪ್ರೀತಿಸುವುದು — ಇದಕ್ಕೆ ಅಹೇತುಕ ಭಕ್ತಿ, ಶುದ್ಧ ಭಕ್ತಿ ಎಂದು ಹೆಸರು. ಪ್ರಹ್ಲಾದನಿಗೆ ಇದು ಇತ್ತು. ರಾಜ್ಯ ಬೇಕಾಗಿರಲಿಲ್ಲ, ಐಶ್ವರ್ಯ ಬೇಕಾಗಿರಲಿಲ್ಲ, ಕೇವಲ 'ಹರಿ' ಮಾತ್ರ ಆತನಿಗೆ ಬೇಕಾಗಿತ್ತು.




**ಕೃ**ಷ್ಣನ ವಿರಹದಿಂದ ಯಶೋದೆ ಉನ್ಮತ್ತಳಾಗಿದ್ದಾಳೆ. ಶ್ರೀಮತಿಯನ್ನು (ರಾಧೆಯನ್ನು) ನೋಡಲು ಹೋಗಿದ್ದಾಳೆ. ಆಗ ಶ್ರೀಮತಿ ಧ್ಯಾನ ಮಾಡುತ್ತಿದ್ದಳು. ಆಕೆ ಭಾವಾವಿಷ್ಟಳಾಗಿ ಯಶೋದೆಗೆ ಹೇಳಿದಳು, 'ನಾನು ಆ ಮೂಲಪ್ರಕೃತಿ ಆದ್ಯಾಶಕ್ತಿ, ನೀನು ಒಂದು ವರ ಬೇಡಿಕೊ' ಎಂದು. ಯಶೋದೆ ಹೇಳಿದಳು, 'ನಾನು ಏನನ್ನು ತಾನೇ ಕೇಳಲಿ? ಕೊಡುವುದಾದರೆ, ಕಾಯಾ ವಾಚಾ ಮನಸಾ ಆತನ ಚಿಂತನೆ, ಆತನ ಸೇವೆ ಮಾಡುವಂತೆ; ಕಿವಿಯಿಂದ ಆತನ ನಾಮಗುಣ ಕೀರ್ತನೆಯನ್ನು ಕೇಳುವಂತೆ; ಕಣ್ಣಿನಿಂದ ಆತನ ರೂಪವನ್ನು ಮತ್ತು ಆತನ ಭಕ್ತರನ್ನು ನೋಡುವಂತೆ ಅನುಗ್ರಹಿಸು.'



**ಯು**ಧಿಷ್ಠಿರ ತನ್ನ ಸಕಲ ಪಾಪಗಳನ್ನು ಶ್ರೀಕೃಷ್ಣನಿಗೆ ಅರ್ಪಿಸಲು ಸಿದ್ಧನಾಗುತ್ತಿದ್ದಾಗ ಒಬ್ಬ (ಭೀಮ) 'ಅಂಥ ಕಾರ್ಯವನ್ನು ಎಂದಿಗೂ ಮಾಡಬೇಡ — ಶ್ರೀಕೃಷ್ಣನಿಗೆ ನೀನು ಏನು ಅರ್ಪಿಸುವಿಯೊ, ಅದು ಒಂದು ಸಹಸ್ರಮಡಿಯಾಗಿ ನಿನಗೆ ಹಿಂದಿರುಗಿ ಬರುತ್ತದೆ' ಎಂದು ಎಚ್ಚರಿಕೆ ಕೊಟ್ಟ.



**ಸೀ**ತೆ ಹನುಮಂತನಿಗೆ, 'ಮಗು ನಾನೇ ಒಂದು ರೂಪಿನಲ್ಲಿ ರಾಮ, ಒಂದು ರೂಪಿನಲ್ಲಿ ಸೀತೆ ಆಗಿದ್ದೇನೆ; ಒಂದು ರೂಪಿನಲ್ಲಿ ಇಂದ್ರ, ಒಂದು ರೂಪಿನಲ್ಲಿ ಇಂದ್ರಾಣಿ — ಒಂದು ರೂಪಿನಲ್ಲಿ ಬ್ರಹ್ಮ, ಒಂದು ರೂಪಿನಲ್ಲಿ ಬ್ರಹ್ಮಾಣಿ, — ಒಂದು ರೂಪಿನಲ್ಲಿ ರುದ್ರ, ಒಂದು ರೂಪಿನಲ್ಲಿ ರುದ್ರಾಣಿ, — ಆಗಿದ್ದೇನೆ' ಎಂದು ಹೇಳಿದಳು. ಏನೇನು ನಾಮರೂಪಗಳಿವೆಯೋ ಅವೆಲ್ಲಾ ಚಿಚ್ಛಕ್ತಿಯ ಐಶ್ವರ್ಯ (ಆವಿರ್ಭಾವ).



'ಶ್ರೀರಾಮಕೃಷ್ಣ ವಚನವೇದ'ದಿಂದ